# ಅಲಯನ್ಸ್ ವಿವಿ ವಿಪ್ರೋ 3ಡಿ ಜತೆ ಒಪ್ಪಂದ



**ಬೆಂಗಳೂರು:** ಅಲಯನ್ಸ್ ವಿವಿ ವಿಪ್ರೋ 3ಡಿ ಜತೆ ಎಂಬಿಎ ಪದವಿ ಸ್ತರದಲ್ಲಿ ಹಲವು ವಿನೂತನ ವಿಷಯಗಳನ್ನು ಅಳವಡಿಸುವ ಕುರಿತು ಮೆಮೊರಂಡಮ್ ಆಫ್ ಅಂಡ ಸ್ಟಾಂಡಿಂಗ್ ಒಡಂಬಡಿಕೆ ಮಾಡಿಕೊಂಡಿದೆ.

ಮೆಟಲ್ ಅಡಕ್ಟೀವ್ ಮ್ಯಾನು ಫ್ಯಾಕ್ಚರಿಂಗ್, ಬಿಜಿನೆಸ್ ಅಫ್ ವಿಪ್ರೋ ಇನ್ಸ್ಟ್ರಕ್ಷನ್ ಎಂಜಿನಿಯರಿಂಗ್ ವಿಷಯ ಗಳ ಮೇಲೆ ಸಹಿ ಹಾಕುವ ಮೂಲಕ ಎಂಬಿಎ ಪದವಿಯಲ್ಲಿ ಸ್ಮಾರ್ಟ್ ಮ್ಯಾನುಫ್ಯಾಕ್ಚರಿಂಗ್ ಆ್ಯಂಡ್ ಡಿಜಿಟಲ್ ಲೀಡರ್ ಶಿಪ್ ಕಾರ್ಯಕ್ರಮಕ್ಕೆ ಇಂಬು ನೀಡಿದೆ. ಬಹುತೇಕ ಉದ್ಯಮಗಳು ಡಿಜಿಟಲ್ ತಾಂತ್ರಿಕತೆಯ ಮೇಲೆ ರೂಪು ಗೊಳ್ಳುತ್ತಿದೆ. ಸ್ಮಾರ್ಟ್ ಮ್ಯಾನುಫ್ಯಾಕ್ಚರ್ ಕ್ಷೇತ್ರದಲ್ಲಿ ಉದ್ಯೋಗ ಬೇಡಿಕೆ ಕೂಡ ಹೆಚ್ಚಾಗಿದೆ.

ಏರೋನಾಟಿಕಲ್, ಆಟೋ ಮೊಟೀವ್ ಎಲೆಕ್ಟ್ರಾನಿಕ್ಸ್, ಹೆಲ್ತ್ ಕೇರ್ ರಿನಿವಬಲ್ ಎನರ್ಜಿ ಕ್ಷೇತ್ರದಲ್ಲಿ ಅತಿ ಹೆಚ್ಚು ಬೇಡಿಕೆ ಇದೆ. ಡಿಜಿಟಲ್ ಉತ್ಪಾದನಾ ತಂತ್ರಜ್ಞಾನಗಳು, ವ್ಯವಹಾರ ನಿರ್ವಹಣೆ ಮತ್ತು ಅನುಷ್ಠಾನ ವಿಧಾನ ಗಳಲ್ಲಿ ಸಾಮರ್ಥ್ಯಗಳ ಸರಿಯಾದ ಮಿಶ್ರಣದ ಸೃಜನಾತ್ಮಕ ರೀತಿಯಲ್ಲಿ ಉಪಯೋಗವನ್ನು ಮಾಡಲು ಸಹಕಾರಿಯಾಗುತ್ತದೆ.

ವಿದ್ಯಾರ್ಥಿಗಳ ಮಧ್ಯೆ ವಿನೂತನ ತಂತ್ರಜ್ಞಾನದ ವಾತವರಣ ಸೃಷ್ಟಿಸುವ ಮೂಲಕ ಅಲಯನ್ಸ್ ವಿಶ್ವವಿದ್ಯಾಲಯ ಹಾಗೂ ವಿಪ್ರೋ 3ಡಿಯೂ ಸ್ಮಾರ್ಟ್ ಮ್ಯಾನುಫ್ಯಾಕ್ಷರಿಂಗ್ ಬಗ್ಗೆ ಸರಳವಾಗಿ ತಿಳಿಯುವಂಥ ವೇದಿಕೆ ಕಲ್ಪಿಸಲಿದೆ. ಅಲ್ಲದೇ ಈ ಕಾರ್ಯಕ್ರಮದಲ್ಲಿ ಭಾಗಿಯಾದ ವಿವಿಧ ಬಗೆಯ ಪದವಿ ವಿದ್ಯಾರ್ಥಿಗಳಿಗೆ ಅಲಯನ್ಸ್ ವಿವಿ ಪ್ರಮಾಣ ಪತ್ರ ನೀಡಲಿದೆ.

ಅಡ್ವಾನ್ಸ್ ಟೆಕ್ನಾಲಜಿ ಸೆಂಟರ್ ನಿರ್ದೇಶಕ ಡಾ. ಯು ಚಂದ್ರಶೇಖರ್, ಸಹ ಕುಲಪತಿ ಡಾ.ಅನುಭಾಸಿಂಗ್, ಕುಲಪತಿ ಡಾ. ನಿವೇದಿತಾ ಮಿಶ್ರ, ಸಹಾಯಕ ಪ್ರೊ.ವೈಸ್ ಚಾನ್ಸಲರ್ ಡಾ. ರಂಜನ್, ಸ್ಕೂಲ್ ಆಫ್ ಬಿಜಿನೆಸ್ ಡೀನ್ ಡಾ. ಮೈಕಲ್ ಜೇಮ್ಸ್ ಬಾರ್ನೆಸ್, ಬಿಬಿಎ ಪ್ರೋಗ್ರಾಮ್ ನಿರ್ದೇಶಕ ಡಾ. ರೋಜಲಿಯನ್ ಪ್ರಧಾನ್, ಸ್ಕೂಲ್ ಆಫ್ ಬಿಜಿನೆಸ್ ಮ್ಯಾನೆಜ್ಮೆಂಟ್ ಡಾ. ಸುಕನ್ಯ ಕುಂದು, ಪ್ರೊ. ಡಾ. ಹರಿನಾಥ್ ಹಾಗೂ ಕಾಲೇಜಿನ ಎಂಜಿನಿಯರ್ ವಿಭಾಗದ ಉಪನ್ಯಾಸಕರು ಇದ್ದರು.